Regd No M 1299 Sri ಶನಿ 24—10—51

SATYAVADI — 35th Year

ಸತ್ಯವಾದಿ

ಸಂಪಾದಕರು- ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ವಾರ್ತೆಗಳು

ಒರ್ಮಾ ಪಾರ್ಲಿಮೆಂಟಿಗೆ ಹೊಸದಾಗಿ ಆರಿಸಲ್ಪಟ್ಟ ಸ್ವತಂತ್ರ ಸದಸ್ಯ ಬೊಸ್ಯೆನರು ಗಂಡಿನೇಟು ಬಿದ್ದ ಗಾಯಗೊಂಡರೆಂದು ರಂಗೂನ್ ವಾರ್ತೆ.

ಮೈಸೂರು ಶಾಸನ ಸಭೆ ಉನ್ನೀದು ವಾರ ಪಬ್ಬಿಯನ್ನು ಕಾಂಗ್ರೆಸ್ ಚುನಾವಣಾ ಸಮಿತಿ ಪ್ರಕಟಿಸಿರುವ ಕುರಿತು ಪರಿಶೀಲಿಸಲು ಬೇಗನೆ ಕಾಂಗ್ರೆಸ್ ಕೆಲಸಗಾರರ ಸಭೆ ಕರೆಯಬೇಕೆಂದು ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಣಯಿಸಿದೆ

ಅಖಿಲ ಭಾರತ ಸಾಮಾಜಿಕ ಶಿಕ್ಷಣ ದಿನಾಚರಣೆ ಪ್ರಯುಕ್ತ ನವೆಂಬರ್ 1 ನೆ ತಾ|| ಮೈಸೂರು ಸಂಸ್ಥಾನದ ಸರ್ವ ಶಿಕ್ಷಣ ಸಂಸ್ಥೆಗಳಿಗೂ ರಜ

ಮೂರು ಸಹಸ್ರ ಮಂದಿ ಬ್ರಿಟಿಷ್ ಸೈನಿಕರು ಸೂಯೆಜ್ ವಿವಾದದಲ್ಲಿ ತೊಳುವ ವಂದಿ ಲಂಡನ್‌ನಿಂದ ಬಂದಿದೆ

ವಾಷಿಂಗ್ಟನ್ ವಾರ್ತೆ ಪ್ರಕಾರ ಪಿಯದಲ್ಲಿ ಈ ಬಾರಿಯಾ ಅಣು ಸಿಡಿತ ಪ್ರಯೋಗವಾಯಿತು. ಇನ್ನೂ ಹಲರು ಪ್ರಯೋಗಗಳಾಗಲಿವೆ

ಭಾರತ ಕಮ್ಯುನಿಸ್ಟ ಪಕ್ಷ ತೆಲಂಗಾಣದಲ್ಲಿ ಚಳವಳಿಯನ್ನು ನಿಲ್ಲಿಸಿದೆ

ಉತ್ತರ ಪ್ರದೇಶ ಜಹಗೀರುದಾರರ ಸಂಘದ ಅಧ್ಯಕ್ಷರ್ ಜಗದೀಶ ಪ್ರಸಾದರು ಲಕ್ನೋವಿನಲ್ಲಿ ಹೇಳಿಕೆ ಇತ್ತು ಜಮೀಂದಾರರು ಕಾಂಗ್ರೆಸಿನ ವಿರುದ್ಧ ಮತ ಕೊಡಲು ತಿಳಿಸಿದ್ದಾರೆ

ಭಾರತದ ರಾಷ್ಟ್ರಪತಿ ಶ್ರೀ ಸೆಕ್ ಮತ್ತು ಅವರ ಪತ್ನಿಗೆ ಮಾರ್ಷಿಲ್ ಟೀಟೋ ಮೊನ್ನೆ ಸತ್ಕಾರವಿತ್ತರೆಂದು ಬೆಲ್‌ಗ್ರೇಡ ವಾರ್ತೆ

ಮುಚ್ಚಿಟ್ಟಿದ್ದ ಆದಾಯವನ್ನು ವ್ಯಕ್ತ ಮಾಡಲು ನಿನ್ನೆಯೇ ಕಡೇ ದಿನ ಒಟ್ಟು ರೂ 375 ವರಮಾನ ನಿನ್ನೆ ಪತ್ತೆ ಆಯಿತೆಂದು ದೆಹಲಿ ವಾರ್ತೆ.

ಬೆಂಗಳೂರಿನಲ್ಲಿ ಸಮಾವೇಶವಾಗಿದ್ದ ಅಖಿಲ ಮೈಸೂರು ಮುಸ್ಲಿಂ ಸಂವೇಶವನ್ನು ಹಿಂಕರಿಸುವ ಸಂಸ್ಥೆಯೊಡನೆ ಚುನಾವಣೆಯಲ್ಲಿ ಸಹಕರಿಸಲು ನಿರ್ಧರಿಸಿದೆ.

ಮೈಸೂರು ನಗರದಲ್ಲಿ ಜನತಾಪಕ್ಷ ಸಧ್ಯದಲ್ಲಿಯೇ ವ್ಯವಸ್ಥಿತವಾಗಿ ಏ ಪಾರ್ಟಿಗಳಾಗಿ ತ್ರಿರುವದೆಂದು ತಿಳಿದು ಬಂದಿದೆ.

ಎರಡು ಸಿಂಹಗಳು !

× ಮೈಸೂರು ಟೌನ್ ಹಾಲ್ ಮೈದಾನಿನಲ್ಲಿ ಎರಡು ಸಿಂಹಗಳ ಘೋರ ಗರ್ಜನೆ !

× ಒಂದು ದೇವಲ್ ಸರ್ಕಸ್ ಜೋನಿನಲ್ಲಿ ಸೆರೆ ಬಿದ್ದ ಸಿಂಹ !!

× ಮತ್ತೊಂದು ಭಾರಿ ಸಿಂಹ ! ಕಾಂಗ್ರೆಸ್ ಕೇಜ್ ಕಂಬಿಗಳನ್ನು ಹರಿದು ಹೊರಬಂದ ನರ-ಸಿಂಹ ! ಕೃಪಾಲಿನಿ !

× ಸಾಕ್ಷಾತ್ ಸಿಂಹಕ್ಕಿಂತ ನರ-ಸಿಂಹ ಗರ್ಜನೆಯೇ ಭಯಂಕರವಿತ್ತ !!!

ಕಾಂಗ್ರೆಸಿಗೆ ಪುನಹ ಪಟ್ಟಾಬಿಷೇಕ ಮಾಡಿದುದಾದರೆ
ಇನ್ನು 5 ವರ್ಷಗಳಲ್ಲಿ ಇಡೀ ಭಾರತ ಸುಡುಗಾಡಾದೀತು!

ಆಚಾರ್ಯ ಕೃಪಾಲಿನಿ ಅವರ ಎಚ್ಚರಿಕೆ

ಮೈಸೂರು : ಭಾರತ ಸರ್ವತಂತ್ರ ಸ್ವತಂತ್ರವಾಗಿ ನಾಲ್ಕು ವರ್ಷಗಳಾದವು ಈ ಅವಧಿಯಲ್ಲಿ ದೇಶದ ನಾನಾ ಭಾಗಗಳಲ್ಲಿ ಕಾಂಗ್ರೆಸಿನ ದುರ್ಬಲ ಆಡಳಿತದಿಸೆಯಿಂದ ಅನ್ನವಿಲ್ಲದೆ ಜನ ಸತ್ತರು. ಹೊತ್ತು ಹೆತ್ತು ಸಾಕಲಾರದೆ ಮಕ್ಕಳನ್ನ ಕೊಂದ ಪ್ರಸಂಗಗಳು ಕೇಳಿಬಂದವು ಪುನಃ ಕಾಂಗ್ರೆಸಿಗೆ ಅಧಿಕಾರವಿತ್ತು ರಾಜ್ಯಾಭಿಷೇಕ ಮಾಡಿದರೆ, ಆ ಐದು ವರ್ಷಗಳ ಅವಧಿಯಲ್ಲಿ, ಜನ ಅನ್ನವಿಲ್ಲದೆ ಸತ್ತು, ಇಡೀ ನಾಡೇ ಸುಡುಗಾಡಾಗುವ ಸ್ಥಿತಿಯೊದಗೀತು! — ಎಂಬುದಾಗಿ ಅಖಿಲ ಭಾರತ ಕಿಸಾನ್ ಮಜದೂರ್ ಪ್ರಜಾಪಕ್ಷದ ಸಂಸ್ಥಾಪಕ ಅಧ್ಯಕ್ಷ ಆಚಾರ್ಯ ಕೃಪಾಲಿನಿ ನಿನ್ನೆ ಸಂಜೆ ರಂಗಾಚಾರ್ಲು ಪುರಭವನ ಮೈದಾನದಲ್ಲಿ ಸಮಾವೇಶವಾಗಿದ್ದ ಪ್ರಚಂಡ ಸಾರ್ವಜನಿಕ ಸಭೆಯ ವಾಲಕ ವರ್ತಿದಾರರಿಗೆ ಎಚ್ಚರಿಕೆಯನ್ನಿತ್ತರು.

ರಾಷ್ಟ್ರದಲ್ಲಿ ಅನ್ನ ಬಟ್ಟೆಬಿಗಳ ಅಭಾವದಿಂದ, ಆಡಳಿತ ದೌರ್ಬಲ್ಯದಿಂದ ಉಪಯೋಗಿಸುವ ಅಂಚೆ, ಕಳ್ಳ ಪೆಟಿಗೆಗಳನ್ನು ರವಿಸಿ. ಆಡಳಿತ ದೌರ್ಬಲ್ಯದಿಂದ ಸರ್ವಸ್ವ ನೀತಿಯ ನೇರಿನ ಪರಿಣಾಮ ಮುನ್ನ ಗುಸಗುಸವಿಲ್ಲ. ಈಗ ಪೇಟೆಯಲ್ಲೂ ಅದೇ ಮಾತು ಎಲ್ಲೆಲ್ಲೂ ಅದೇ ಮಾತು ಸಾರ್ವಜನಿಕ ಸ್ಥಳಗಳಲ್ಲಿ, 3 ನೇ ತರಗತಿ ಗಾಡಿಗಳಲ್ಲಿ ಬೆರೆಯುವ ಮಂತ್ರಿಗಳಿಗೆ ಈ ಮಾತುಗಳು ಕೇಳಿಬರಿಕ್ಕು ? ಹೀಗೆಯೇ ಪರಿಸ್ಥಿತಿ ಮುಂದುವರಿದಲ್ಲಿ ದೇಶದಲ್ಲಿ ರಕ್ತ ಪಾತ ಸಂಭವಿಸುವ ಮಹಾಕ್ರಾಂತಿ ತಲೆದೋರಿಂತೆಂಬ ಶಂಕೆ ಉತ್ಪನ್ನವಾಯಿತು. ಕಾಂಗ್ರೆಸಿನಲ್ಲೇ ಇದ್ದು ಈ ಮಹಾ ಪಾಪಕೃತ್ಯಗಳನ್ನು ತಡೆಹಿಡಿಯುವದು ಸಾಧ್ಯವಿಲ್ಲವಾಯಿತು ಆದುದರಿಂದ. ರಕ್ತಪಾತ ಕ್ರಾಂತಿ ತಪ್ಪಿಸಿ ಶಾಂತಿಯುತವಾಗಿ ಪ್ರಜಾ ಪ್ರಭುತ್ವ ಧರ್ಮದಂತೆ, ಅಯೋಗ್ಯ ಆಡಳಿತವನ್ನ ಬದಲಿಸಲು ನವಿಗಾಗಿ ಈ ಪ್ರಜಾಪಕ್ಷವನ್ನ ಕಟ್ಟಿದೆ – ಎಂದು ಆಚಾರ್ಯ ಕೃಪಾಲಿನಿ ತಿಳಿಸಿದರು.

ಪ್ರಜಾಪ ಭುತ್ವದಲ್ಲಿ ಪ್ರಜರೇ ಯಜಮಾನರು. ಆಡಳಿತ ವರ್ಗದವರು ಅವರ ಸೇವಕರು. ಸೇವಕ ಯೋಗ್ಯ ಸೇವೆ ಸಲ್ಲಿಸದಿದ್ದರೆ ಯಾವ ರೀತಿ ಯಜಮಾನ ವರ್ತಿಸುವನೋ ಅಂತೆಯೇ ಅಯೋಗ್ಯ ಆಡಳಿತ ವರ್ಗದವರನ್ನು ಬದ್ಲಾಯಿಸಬೇಕು. ಹೀಗೆ ಮೂರು ನಾಲ್ಕು ಬಾರಿ ಬದಲಿಸಿದರೆ, ಆಡಳಿತ ದಾರರು ಯಜಮಾನರಿಗೆ – ಪ್ರಜರಿಗೆ ಭೀತರಾಗುವರು. ರಾಜ್ಯ ಭಾರ ಸುವ್ಯವಸ್ಥಿತವಾಗುವದು – ಎಂಬುದಾಗಿ ಆಚಾರ್ಯ ಕೃಪಾಲಿನಿ ನುಡಿದರು

ಪ್ರಜಾಪಕ್ಷ ಚುನಾವಣೆಯಲ್ಲಿ ಗೆಲುವು ಪಡೆದು ರಾಜ್ಯ ಕಟ್ಟಿದರೆ ಜನತೆಯ ವಿನಮ್ರ ಸೇವಕನಾಗಿ ದುಡಿಯುವದೆಂದು ಆಚಾರ್ಯ ಕೃಪಾಲಿನಿ ಭಾಷಣ ಇತ್ತರು. ದೇಶದಲ್ಲಿ ಬೆಳೆದಷ್ಟು ಧಾನ್ಯವನ್ನು ಕಲ್ಲು ಮಣ್ಣು ಇಲ್ಲದಂತೆ ಎಲ್ಲರಿಗೂ ಸಮವಾಗಿ ಪ್ರಜಾಪಕ್ಷ ಹಂಚುವುದೆಂದು ಆಚಾರ್ಯರು ತಿಳಿಸಿದರು.

ಪ್ರಜಾಪಕ್ಷ ರಾಜ್ಯವನ್ನು ಭರಿಸಿದರೆ. ಒಡ ವ್ಯಾಪಾರಿಗಳಿಗಲ್ಲ – ಲಕ್ಷಾಧೀಶ ಕಳ್ಳಪೇಟಿಗರಿಗೆ ಏಳು ವರ್ಷ ಜೈಲು ವಾಸ ವಿಧಿಸುವುದೆಂದು ಆಚಾರ್ಯ ಕೃಪಾಲಿನಿ ತಿಳಿಸಿದರು.

ಕಾಂಗ್ರೆಸ್ಸೇ ಸಂತೃಷ್ಟಿಕರ ಸೇವೆ ಸಲ್ಲಿಸಿರುವುದೆಂದ ಜನರಿಗೆ ಅನಿಸಿದರೆ ದಯವಿಟ್ಟು ಕಾಂಗ್ರೆಸಿಗೆ ಮತಹಾಕಿ ಎಂದು ಆಚಾರ್ಯರು ನುಡಿದರು

ಶ್ರೀ ವರಲಕ್ಷ್ಮೀ ಸಂಗೀತ ಮಂದಿರ

ವೇಲ್ಕುಂಡ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ನಾಳೆ ಸಂಜೆ 6 ಗಂಟೆಗೆ ಗೊಂಬೂರಿನ ಶ್ರೀ ಬಿ ವಿ ನಂದರಾಜ್ಯೆಂಗಾರ್ಯರಿಂದ ಕನ್ನಡದಲ್ಲಿ ಪುರಂದರದಾಸರ ಕೀರ್ತನೆಗಳು, ಗುಜರಾತಿ, ಮರಾಠಿ, ಹಿಂದಿ ಸಂಗೀತವನ್ನೊಳಗೊಂಡ ಕಾಲಕ್ಷೇಪವು 'ಭಾರತದ ಪುಣ್ಯಕ್ಷೇತ್ರದ ವಹಿವೆಯನ್ನು' ಕುರಿತು ನಡೆಸಲೇರ್ಪಟ್ಟಿದೆ; ವಂದಿಂದ ಅಭಿಮಾನಿಗಳೆಲ್ಲರೂ ದಯಮಾಡಿಸಬೇಕೆಂದು ಮೈಸೂರು ಸಹೋದರರು ಪ್ರಾರ್ಥಿಸಿರುತ್ತಾರೆ

ಕಂಟ್ರೋಲು ತೆಗೆಯದಿದ್ದರೆ ಉಪವಾಸ

ಗೋಕಾಕ— ಸರಕಾರವು ಎಲ್ಲ ನಿಯಂತ್ರಣಗಳನ್ನೂ ಗಣ್ಯತೆಯೇ ಜೂನ್ ಒಳಗಾಗಿ ತೆಗೆದೊಗೆಯಬೇಕು; ಇಲ್ಲದಿದ್ದರೆ ತಾವು ಆಮರಣ ಉಪವಾಸ ಕೈಕೊಳ್ಳುವುದಾಗಿ ಇಲ್ಲಿಯ ದಾಸಪ್ಪಾ ಎಂಬುವರು. ರಾಷ್ಟ್ರಪತಿ, ಪ್ರಧಾನಿ ಶಿನ, ಆಹಾರ ಶಾಖಾ ಸಚಿವರಿಗೆ ತಂತೀ ವೂಲಕ ತಿಳಿಸಿದ್ದಾರೆ; ಈ ದಾಸಪ್ಪನವರು ಮೊನ್ನೆ ಮೊನ್ನೆ ಮುಳೆರಾಯನಿಗಾಗಿ ಉಪವಾಸ ಕೈಕೊಂಡಿದ್ದರೆಂದೂ ಅದರ ಪರಿಣಾಮವಾಗಿ ಇಲ್ಲಿ ಮುಳೆಯಾಯಿತೆಂದೂ ಹೇಳಲಾಗಿದೆ.

ಒಂದು ಚಿಕ್ಕ ಕಥೆ—

ತ್ಯಾಗಿಯಾರು ?

ಒಬ್ಬ ಬಹು ದೊಡ್ಡ ಧನಿಕ ಹಾಗೂ ವಿದ್ವಾಂಸ ಜಮೀನ್ದಾರನಲ್ಲಿ ಒಂದು ದಿನ, ಒಬ್ಬ ಮಹಾತ್ಮನು ಒಂದು ಅವನನ್ನು ಭೇಟಿ ಮಾಡಿದನು. ಮಹಾತ್ಮನ ಬಹು ತ್ಯಾಗಿಯಾಗಿದ್ದನ ; ಜಮೀನ್ದಾರನು ಅವನಿಗೆ ಒಂದು ಕೊಟ್ಟ ವಸ್ತು ಕೊಡಲು ಇಚ್ಛಿಸಿದನು ; ಆದರೆ ಅವಶ್ಯಕತೆಯಿಲ್ಲದುದರಿಂದ ಅವನು ಅದರ ಸ್ವೀಕಾರ ಮಾಡಲಿಲ್ಲ ಕೆಲವು ಸಮಯ ಸಾಧು-ಸಂಗ ಮಾಡಿದ ಮೇಲೆ ಜಮೀನ್ದಾರನ ಮನಸ್ಸಿನಲ್ಲಿಯೂ ವೈರಾಗ್ಯದ ಭಾವವು ಉತ್ಪನ್ನವಾಯಿತು; ಮತ್ತೆ, ಅವನಿಗೆ ತ್ಯಾಗದ ವಶಸ್ವವು ತಿಳಿಸುಲು ಪ್ರಾರಂಭಿಸಿತು ಅದರ ನಂತರ, ಅವನು ಮಹಾತ್ಮನನ್ನು ದ್ವೇಷಿಸಿ, ಹೀಗಂದನು : — 'ಸ್ವಾಮಿ ಮಹಾರಾಜ ! ನಿನಗೆ ಮತ್ತು ನಿನ್ನ ತ್ಯಾಗಕ್ಕೆ ಧಿಕ್ಕಾರವಾದ

ಮಹಾತ್ಮನು ಬಹು ವಿನಯದಿಂದ ಮಧುರ ಶಬ್ದಗಳಲ್ಲಿ ಹೀಗಂದನು — 'ಗೆಳೆಯಾ ! ಅಯ್ಯೋ ಹಾಗೂ ಅರಿಯದೆ ಜನರು ನನ್ನನು ಉತ್ತಮ ತ್ಯಾಗಿಯೆಂದು ಹೇಳಿ, ನನ್ನ ಪ್ರಶಂಸೆ ಮಾಡಿದಂತಾದರೂ ನಿಜವಾಗಿ ನಾನು ಬಹು ಸ್ವಾರ್ಥಿಯಾಗಿರುವೆನು ನಿನ್ನಂತಹ ಸುಶಿಕ್ಷಿತ ಪುರುಷನು ನನ್ನನ್ನು ತ್ಯಾಗಿಯೆಂದು ಹೇಳಬಲ್ಲನು ? ನಾನು ವಿನಾಶರಹಿತವಾದ ಹಾಗೂ ನಿರಂತರ ಉಳಿಯುವಂಥ ಧನದ ಆಸೆಯನ್ನು ಮಾಡುತ್ತೇನೆ; ಮತ್ತು ಅದಕ್ಕೋಸ್ಕರ ನಾನು ಗಣನೀಯವಲ್ಲದ ಹಾಗೂ ವಿನಾಶೀ ವಸ್ತುಗಳನ್ನು ಪರಿತ್ಯಜಿಸಿರುವೆನು ವಸ್ತುತಃ ತ್ಯಾಗಿಯು ನೀನು ಆಗಿರುತ್ತೀ ನಿನ್ನ ಧನವು ವಿಷಯ ವಸ್ತುಗಳಲ್ಲಿ ಅರಿತ ನಂತರವೂ, ಅದಕ್ಕೋಸ್ಕರ, ನೀನು ಯಾವ ಪ್ರಯತ್ನವನ್ನೂ ಮಾಡವಿಲ್ಲ'

[ಪ್ರ ವ ಂ]

For All Your

Headaches, Eye Troubles and Defective Sight

— consult —

THE EYE – SIGHT INSTITUTE
1430 / 1 Post Office Road,
Krishnamurthipuram, Mysore

ಗೋ ಸಂರಕ್ಷಣೆ ಮಾಡಿ



Protect the Cow

ಅಪೇರ— ಕೀರ್ತಿಯುತ 4 ನೇ ವಾರ

ನವಾರ್ಧಿಕಾರಿ

ಪಾತ್ರ — ಅಂಜಲೀದೇವಿ, ನಾಗಯ್ಯ, ರಾಮಚಂದ್ರ, ಸಂಬಿಯಾರ್
ಮಹೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ರಣಜಿತ್ ಅಮೋಘ 4 ನೇ ವಾರ

ಶಬಿನ್ಹಾನ್

ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

26–10–51 ರಿಂದ ನೌಜವಾನ್

ಪಾತ್ರ— ನಳಿನಿ ಜಯವಂತ್, ಪ್ರೇಮನಾಥ್

ಉಡ್‌ಲಾಂಡ್ ಜಯಪ್ರದ 3 ನೇ ವಾರ

ಶಿಸ್ತು

ಪ್ರತಿ ಸುಸಾರಾವೂ ನೋಡಲೇಬೇಕಾದ ಅಮೋಘ ಪೌರಾಣಿಕ ಹಿಂದಿ ಚಿತ್ರ **ಶ್ರೀ ಗಣೇಶ ಜನ್ಮ**

26–10–51 ರಿಂದ

Neki Aur Badi ನೇಕಿ ಔರ್ ಬದಿ

ಮಧುಬಾಲ, ಗೀತಾಬಾಲಿ, ಕಿದಾರನಾಥ್, ಕಕ್ಕೂ ಪಾತ್ರವಹಿಸಿರುವ
ಸುಮನೋಹರ ಹಿಂದಿ ಚಿತ್ರ] [ಪ್ರತಿ ದಿನ 3 ಪ್ರದರ್ಶನಗಳು

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
- ಪ್ರಬೋಧ -
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1–14–0

For Quality Printing
L. N. Press
Sivarampet, Mysore

ಶಕ್ತಿಸುಧಾ
— ಉತ್ತಮವಾದ ಟಾನಿಕ್ —

SHAKTI SUDHA

A Superb Tonic

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram, Mysore